ಅಧ್ಯಯನ. ಸ್ವಂತ ಅಧ್ಯಯನ ಮಾಡಿಕೊಂಡು ಈ ವಿಷಯಗಳನ್ನು ಬೋಧಿಸಿದೆ.

ಒಂದು ವಿಷಯವನ್ನು ಇಲ್ಲಿ ಹೇಳಬೇಕು. ನಾನು ಬೆಂಗಳೂರಿಗೆ ಎಂ.ಎ. ವ್ಯಾಸಂಗಕ್ಕೆ ಬಂದಾಗ ನನ್ನ ಸಾಹಿತ್ಯಾಭಿವ್ಯಕ್ತಿಯ ಮಿತಿಗಳು ಗೊತ್ತಾದವು. ಆಗ ನವ್ಯ ಸಾಹಿತ್ಯದ ಉಬ್ಬರದ ಕಾಲ. ನವ್ಯ ಸಾಹಿತಿಗಳ ನಡೆ ನುಡಿಗಳನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದ ನಾನು ಅನಂತರ ನವ್ಯಕವಿತೆಗಳನ್ನು ಬರೆಯಲಾರಂಭಿಸಿದೆ. ನನ್ನ ಅಂದಿನ ನವ್ಯಕಾವ್ಯ ಮಾದರಿಯ ಕವಿತೆಗಳಲ್ಲಿ ಸಾಮಾಜಿಕ ಕಾಳಜಿ ಇತ್ತು. ಇದು ನನ್ನ ಮನಸ್ಸಿನ ಭಾಗ. ಅಂದಿನಿಂದ ಇಂದಿನವರೆಗೆ ನಾನು ನನ್ನ ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಸಾಮಾಜಿಕ ಕಾಳಜಿಯನ್ನು ಬಿಟ್ಟಿಲ್ಲ; ಬಿಡುವುದಿಲ್ಲ. ವ್ಯಕ್ತಿಯ ಬದುಕು ಮತ್ತು ಸಾಮಾಜಿಕ ಬದುಕು ಪರಸ್ಪರ ಬೆಸೆದುಕೊಂಡಿದ್ದೇ ಹೊರತು ಪ್ರತ್ಯೇಕವಲ್ಲ ಎಂಬ ನಂಬಿಕೆಯೇ ಇದಕ್ಕೆ ಕಾರಣ. ಜೊತೆಗೆ, ಸಾಹಿತ್ಯವೆನ್ನುವುದು ನನಗೆ ಲೋಲುಪತೆ ಅಲ್ಲ; ಅದು ಸಾಮಾಜಿಕತೆ. ಆದ್ದರಿಂದ ನಮಗೆ ಸಾಮಾಜಿಕ ಜವಾಬ್ದಾರಿ ಮುಖ್ಯ. ಸಾಮಾಜಿಕ ಜವಾಬ್ದಾರಿಯ ಜೀವಜಲದಲ್ಲೇ ವ್ಯಕ್ತಿ ವಿಶಿಷ್ಟ ಧಾರೆಯನ್ನು ಹರಿಸಬಹುದು.

◆ **ಇಲ್ಲಿನ ಶೋಷಣೆ, ಅಸಮಾನತೆ, ಅನ್ಯಾಯಗಳಿಗೆ ಸಾಹಿತ್ಯವು ಅಭಿವ್ಯಕ್ತಿ ನೀಡಬೇಕು ಎಂಬ ಮನೋಧರ್ಮ ನಿಮ್ಮೊಳಗೆ ರೂಪುಗೊಳ್ಳಲು ಏನು ಕಾರಣ? ಆ ಸಂದರ್ಭ ಯಾವುದಾಗಿತ್ತು?**

ನಾನು ಸಮಾಜದಲ್ಲಿ ಅಸಮಾನತೆಯ ಸುಳಿ ಸಂಕಟಗಳನ್ನು ಕಂಡವನು. ಊಳಿಗಮಾನ್ಯ ಮನಃಸ್ಥಿತಿ ಪೂರ್ಣ ಅಳಿಯದೆ ಇದ್ದ ಸಮಾಜದಲ್ಲಿ ಬೆಳೆದವನು. ಸಾಹಿತಿಯಾದವನು ತಾನು ಬದುಕುತ್ತಿರುವ ಸಮಾಜದ ಭೂತ ಮತ್ತು ವರ್ತಮಾನಗಳನ್ನು ಅರಿಯುತ್ತಲೇ ಅಭಿವ್ಯಕ್ತಿಸಬೇಕೆಂದು ನಂಬಿದವನು. ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ಶೋಷಣೆಗೆ ಒಳಗಾದವರ ಬದುಕಿಗೆ ಸ್ಪಂದಿಸುವುದು ಒಂದು ಜವಾಬ್ದಾರಿ ಎಂದು ತಿಳಿದಿದ್ದೇನೆ. ರಷ್ಯಾದ ಲೇಖಕ ಪ್ಲೆಖನೋವ್ ತನ್ನ '**Art and Social life**' ಕೃತಿಯಲ್ಲಿ ಹೇಳಿದ ಒಂದು ಮಾತು ನನಗೆ ಯಾವಾಗಲೂ ಆದರ್ಶವೆನ್ನಿಸಿದೆ. ಆ ಮಾತು ಹೀಗಿದೆ: 'ನಾವು ಕಲಾಕಾರರು (ಸಾಹಿತಿಗಳು) ಜನರಿಂದ ಮನ್ನಣೆಯನ್ನು ಬಯಸುತ್ತೇವೆ. ಜನರು ನಮ್ಮಿಂದ ಜವಾಬ್ದಾರಿಯನ್ನು ಬಯಸುತ್ತಾರೆ.' ಹೀಗೆ ಜನರಿಗೆ ಜವಾಬ್ದಾರರಾಗುವುದು ನಮ್ಮ ಸಂವೇದನಾಭಿವ್ಯಕ್ತಿಯ ಅಂತರ್ಜಲವಾಗಬೇಕು. ನೋಮ್‌ಚಾಮಸ್ಕಿ ಹೇಳಿದ್ದು ಇದನ್ನೇ ಅಲ್ಲವೆ? 'ನಾವು ಸಾಹಿತಿಗಳು ನಗ್ನ ಸತ್ಯವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು. ಇದು ಅವರ ಮುಖ್ಯ ಕೆಲಸವಾಗಬೇಕು. ಜನರಿಗೆ ಸತ್ಯವನ್ನು ಮನವರಿಕೆ ಮಾಡಿಕೊಡುವುದು ಸಾಹಿತಿಗಳ ಕೆಲಸ ಮಾತ್ರವಲ್ಲ, ಎಲ್ಲ ಮರ್ಯಾದಸ್ಥ ಮನುಷ್ಯರ ಕೆಲಸ.' ಈ ಮಾತು ಸತ್ಯದ ಪರವಾದ ಮಾತು. ಹೀಗಾಗಿ, ನಾವೆಲ್ಲ ಮರ್ಯಾದಸ್ಥ ಮನುಷ್ಯರಾಗೋಣ ಎನಿಸುತ್ತದೆ. ಅಂತೆಯೇ, ಒಂದು ಮಾತನ್ನು ಹೇಳುತ್ತ ಬಂದಿದ್ದೇನೆ; 'ನನ್ನ ಸಾಹಿತ್ಯ ಮತ್ತು ಸಿನಿಮಾಗಳನ್ನು ಒಳ್ಳೆಯ ಮಾದರಿ ಅಲ್ಲ ಅಂತ ಯಾರಾದ್ರೂ ಹೇಳಿದ್ರೆ ಅದು ಅವರ ಅಭಿಪ್ರಾಯ ಅಂತ ಸುಮ್ಮನಾಗ್ತೇನೆ. ಆದರೆ, ಒಳ್ಳೆಯ ಮನುಷ್ಯ ಅಲ್ಲ ಅಂದ್ರೆ ಸಿಟ್ಟಾಗ್ತೇನೆ'. ಒಳ್ಳೆಯ ಮನುಷ್ಯನ ಆಶಯವೆ ನನ್ನ ಸಾಹಿತ್ಯ ಮತ್ತು ಸಿನಿಮಾಗಳ ಸಂವೇದನೆ.

◆ **ನೀವು ಬರವಣಿಗೆ ಶುರುಮಾಡಿದಾಗ ಆರಂಭದಲ್ಲಿ ಏನನ್ನು ಬರೆಯಲು ಯತ್ನಿಸಿದಿರಿ? ಈಗ ಹಿಂತಿರುಗಿ ನೋಡಿದಾಗ ಅದು ನಿಮ್ಮ ಬರವಣಿಗೆಯ ನಿಜವಾದ ದಾರಿಯಾಗಿತ್ತು ಅಂತ ಅನ್ನಿಸಿದೆಯೆ?**

ನಾನು ಮೊದಲು ಬರೆದದ್ದು ನಾಟಕ. ಎರಡನೇ ಬಿ.ಎ. ಓದುತ್ತಿರುವಾಗಲೇ 'ಮುಳ್ಳು ಹಾದಿ'